ಸಿ ಸಿ ನಂ. 282 /2022

ಪಿ ಡಬ್ಲ್ಯೂ 1 ಹೆಚ್ ಎಂ ಯೋಗೇಶ್ ಬಿನ್ ಪಾಲಾಕ್ಷಯ್ಯ ಹೆಚ್ ಎಂ

(ದಿನಾಂಕ 11-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು ಆರೋಪಿ ಪರ ಶ್ರೀ ಬಿ ಎನ್ ವಕೀಲರಿಂದಃ-

ಸಾಮಾನ್ಯವಾಗಿ ಸಾಲ ಕೊಡುವಾಗ ಸಾಲ ತೆಗೆದುಕೊಳ್ಳುವವರ ಆರ್ಥಿಕ ಸಾಮರ್ಥ್ಯವನ್ನು ನೋಡಲಾಗುತ್ತದೆಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿತನು ಮೂರು ಎಲೆಕ್ಟ್ರಿಕಲ್ ಶಾಪ್ ಗಳನ್ನು ಹೊಂದಿರುತ್ತಾರೆಂದು ನುಡಿಯುತ್ತಾರೆ. ಸದರಿ ಎಲೆಕ್ಟ್ರಿಕಲ್ ಶಾಪುಗಳ ಸಂಬಂಧ ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಆರೋಪಿತನಿಗೆ ಸಾಲವನ್ನು ಕೊಡುವಾಗ ಆತನ ಕುಟುಂಬಸ್ಥರಿಗೆ ತಿಳಿಸಿರುವುದಿಲ್ಲ. ನನ್ನ ಪಿರ್ಯಾದಿನಲ್ಲಿ ಎಲೆಕ್ಟ್ರಿಕಲ್ ಶಾಪುಗಳ ಅಭಿವೃದ್ಧಿ ಸಲುವಾಗ ಆರೋಪಿ ಹಣವನ್ನು ಪಡೆದಿರುವ ಬಗ್ಗೆ ಬರೆಸಿರುತ್ತೇನೆ. ಆರೋಪಿಯು ದಿಃ 22-02-2022 ರಂದು ನಿಪಿ-1ರ ಚೆಕ್ಕನ್ನು ಕೊಟ್ಟಿರುತ್ತಾರೆ. ಆರೋಪಿಯು ಚೆಕ್ಕನ್ನು ತುಂಬಿ ಕೊಟ್ಟಿದ್ದರು. ದಿಃ 22-02-2022 ರಂದು ನಿಪಿ-1 ಚೆಕ್ಕನ್ನು ನಗಧಿಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಲಾಯಿತು. ದಿಃ 24-02-2022 ರಂದು ಬ್ಯಾಂಕಿನವರು ಹಿಂಬರಹವನ್ನು ಕೊಟ್ಟಿರುತ್ತಾರೆ. ಆರೋಪಿ ಮತ್ತು ಆತನ ಮಕ್ಕಳು ಯಾವುದೇ ಎಲೆಕ್ಟ್ರಿಕಲ್ ಶಾಪನ್ನು ನಡೆಸುತ್ತಿರುವುದಿಲ್ಲವೆಂದರೆ ಸರಿಯಲ್ಲ.

ಆರೋಪಿ ಕುಟುಂಬದವರು ಆರ್ಥಿಕವಾಗಿ ಸಭಲರಾಗಿದ್ದು ಅವರು ಯಾವುದೇ ಸಾಲವನ್ನು ಪಡೆದುಕೊಳ್ಳುವ ಪ್ರಮೇಯವೇ ಇರುವುದಿಲ್ಲವೆಂದರೆ ಸರಿಯಲ್ಲ. ನಿಪಿ-1 ಆರೋಪಿತನಿಗೆ ಸಂಬಂಧಪಡದ ಚೆಕ್ಕಾಗಿದ್ದು ನಾನು ಆರೋಪಿತನ ಸಂಬಂಧಿಯಾದ ಕಾರಣ ಆತನ ಬ್ಯಾಂಕ್ ಖಾತೆಯನ್ನು ಉಪಯೋಗಿಸಿ ಬೇರೆ ಯಾವುದೋ ಚೆಕ್ಕನ್ನು ನಗಧೀಕರಣಕ್ಕಾಗಿ ಹಾಜರುಪಡಿಸಿ ಆರೋಪಿತನ ವಿರುದ್ದ ಸುಳ್ಳು ಪಿರ್ಯಾದನ್ನು ದಾಖಲುಪಡಿಸಿರುತ್ತೇನೆಂದರೆ ಸರಿಯಲ್ಲ.

ಸಿ ಸಿ ನಂ. 282 /2022

ಪಿ ಡಬ್ಲ್ಯೂ 1 ಹೆಚ್ ಎಂ ಯೋಗೇಶ್ ಬಿನ್ ಪಾಲಾಕ್ಷಯ್ಯ ಹೆಚ್ ಎಂ

ಆರೋಪಿತನ ವಕಾಲತ್‌ನಾಮೆಯಲ್ಲಿರುವ ಸಹಿ ಹಾಗೂ ನಿಪಿ-1 ಚೆಕ್ಕಿನ ಮೇಲಿರುವಂತಹ ಆರೋಪಿತನ ನಿಪಿ-1(ಎ) ಸಹಿಯಲ್ಲಿ ವ್ಯತ್ಯಾಸ ಇರುತ್ತದೆಂದರೆ ಸರಿಯಲ್ಲ. ದಿಃ 14-03-2022 ರಂದು ಆರೋಪಿತನಿಗೆ ಲಿಖಿತ ನೋಟೀಸನ್ನು ಕೊಡಲಾಗಿತ್ತು.

ಸಾಮಾನ್ಯವಾಗಿ ರೈತರು ದಿನಗೂಲಿ ಕೆಲಸ ಮಾಡುವರಾಗಿದ್ದು ಬೇರೆಯವರ ಬಳಿ ಸಾಲವನ್ನು ತೆಗೆದುಕೊಳ್ಳುತ್ತಾರೆಂದರೆ ಸರಿ. ಸಾಮಾನ್ಯವಾಗಿ ನಾನೂ ಕೂಡಾ ನನ್ನ ಸ್ನೇಹಿತರಿಗೆ ಸಂಬಂಧಿಕರಿಗೆ ಸಾಲ ಕೇಳಲು ಬಂದಾಗ ಕೊಡುತ್ತೇನೆಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಸರ್ಕಾರಿ ನೌಕರನಿದ್ದೇನೆಂದರೆ ಸರಿ. ನಾನು ಲೇವಾದೇವಿ ವ್ಯವಹಾರವನ್ನು ಮಾಡಿರುವುದಿಲ್ಲ. ನಾನು ಲೇವಾದೇವಿಳಿ ಪರವಾನಿಗೆಯನ್ನು ಪಡೆಯದೇ ಬಡ್ಡಿ ವ್ಯವಹಾರ ಮಾಡುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯು ನನ್ನ ಬಳಿ ಯಾವುದೇ ಸಾಲ ಪಡೆದಿಲ್ಲ ಹಾಗೂ ನಾನು ಆತನಿಗೆ ಯಾವುದೇ ಸಾಲವನ್ನು ಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ. ನಾನು ಆರೋಪಿತನ ವಿರುದ್ಧ ಸುಳ್ಳು ಪಿರ್ಯಾದನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ